ದುರುಪಯೋಗ ಪಡಿಸಿದ ಆರೋಪದ ಮೇಲೆ ದಿನಾಂಕ: 25.03.2006ರಂದು ಕೆ.ಸಿ.ಸಿ. ಬ್ಯಾಂಕ್ ನಿ., ಧಾರವಾಡ ಇದರ ಸಾಮಾನ್ಯ ಪದವ್ಯಂದ ಸಮಿತಿಯು ಸದರಿಯವರನ್ನು ಅಮಾನತ್ತಿನಲ್ಲಿದ್ದಿರುತ್ತದೆ. ಅಮಾನತ್ತುಗೊಂಡ ಈ ವ್ಯವಸ್ಥಾಪಕರ ಸ್ಥಾನಕ್ಕೆ ಜಿಲ್ಲಾ ಬ್ಯಾಂಕಿನ ಹಿರಿಯ ಪರಿವೀಕ್ಷಕರನ್ನು ಸಂಘದ ಪ್ರಭಾರ ವ್ಯವಸ್ಥಾಪಕರೆಂದು ನೇಮಿಸಿರುತ್ತಾರೆ. ಅಮಾನತ್ತುಗೊಂಡ ವ್ಯವಸ್ಥಾಪಕರು ಸಂಘದ ಪ್ರಭಾರ ವಹಿಸಿಕೊಡದೆ ಸಂಘದ ಬಾಗಿಲಿಗೆ ಬೀಗ ಹಾಕಿ ತಪ್ಪಿಸಿಕೊಂಡಿರುತ್ತಾರೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 31ಎರ ಪ್ರಕಾರ ಸಂಘದ ಕೀಲಿ ಒಡೆದು ಪ್ರಭಾರ ವಹಿಸಿಕೊಡಲು ಸಹಕಾರ ಅಭಿವೃದ್ಧಿ ಅಧಿಕಾರಿ, ಮುಂಡರಗಿ ಇವರಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು,ಗದಗ ಉಪವಿಭಾಗ, ಗದಗ ಇವರು ಅಧಿಕಾರ ನೀಡಿರುತ್ತಾರೆ. ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಜಿಲ್ಲಾ ಬ್ಯಾಂಕಿನ ಸಿಬ್ಬಂದಿಯವರುಗಳು, ಒಬ್ಬ ಸಹಾಯಕ ಆರಕ್ಷಕ ಉಪನಿರೀಕ್ಷಕರು ಮತ್ತು ಇಬ್ಬರು ಪೊಲೀಸ್ ಹವಾಲ್ದಾರ್ ಸಮೇತ ಕೀಲಿ ಒಡೆದು ಪ್ರಭಾರ ವಹಿಸಿಕೊಳ್ಳುವ ಸಲುವಾಗಿ ಗ್ರಾಮಕ್ಕೆ ದಿನಾಂಕ: 23.05.2006ರಂದು ಭೇಟಿ ನೀಡಿರುತ್ತಾರೆ. ಆದರೆ ಗ್ರಾಮದ ಸಾರ್ವಜನಿಕರು ಹಾಗೂ ಸಂಘದ ಸದಸ್ಯರು ಪ್ರತಿರೋಧ ಒಡ್ಡಿ ಕೀಲಿ ಒಡೆಯಲು ಅಡ್ಡಿಪಡಿಸಿರುವುದರಿಂದ ಗ್ರಾಮದ ಶಾಂತಿಗೆ ಭಂಗವಾಗಬಹುದಾದ ಸಾಧ್ಯತೆಯ ಹಿನ್ನೆಲೆಯಲ್ಲಿ ಕೀಲಿ ಒಡೆದು ಪ್ರಭಾರವನ್ನು ವಹಿಸಿಕೊಳ್ಳಲಾಗದೆ ಹಿಂತಿರುಗಿರುತ್ತಾರೆ. ಹೆಚ್ಚಿನ ಪೊಲೀಸ್ ಬಲದೊಂದಿಗೆ ಸದರಿ ಗ್ರಾಮಕ್ಕೆ ಹೋಗಿ ಪ್ರಭಾರವನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಇ) ಸಂಘದ ಪ್ರಭಾರ ವಹಿಸದ ವ್ಯವಸ್ಥಾಪಕ ಈಗಾಗಲೇ ಅಮಾನತ್ತಿನಲ್ಲಿರುತ್ತಾರೆ. ಇವರ ವಿರುದ್ಧ ಶಿಸ್ತಿನ ವಿಚಾರಣೆಗೆ ಆದೇಶಿಸಲಾಗಿದೆ. ವರದಿಯನ್ನು ನಿರೀಕ್ಷಿಸಲಾಗಿದೆ. ಸಂಘದ ಪ್ರಭಾರ ತೆಗೆದುಕೊಳ್ಳದ ಹಾಗೂ ಪ್ರಭಾರ ಕೊಡಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಅಗತ್ಯತೆ ಕಂಡುಬಂದಿರುವುದಿಲ್ಲ.

ಈ) ಇಲ್ಲ.

ಉ) ಹೌದು.

ಕುಡಿಯುವ ನೀರಿನ ಸಮಸ್ಯೆ

298 (1654) ಶ್ರೀ ತಿಮ್ಮರಾಯಪ್ಪ ಕೆ.ಎಂ. (ಪಾವಗಡ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪಾವಗಡ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹಿಂದೆ ಪಟ್ಟಣಕ್ಕೆ ನೀರು ಸರಬರಾಜಿಗೆ ಕೈಗೊಂಡಿರುವ ಯೋಜನೆಗಳಾವುವು; ಇವುಗಳ ವೆಚ್ಚ ವಿವರಿಸುವುದು;

ಈ) ಈ ಯೋಜನೆಗಳಿಂದ ಸಾರ್ವಜನಿಕರಿಗೆ ಪ್ರಯೋಜನೆಗಳಾಗಿದೆಯೇ; ಆಗದಿದ್ದರೆ, ಈಗ ಉದ್ಭವಿಸಿರುವ ಸಮಸ್ಯೆ ನಿವಾರಿಸಲು ಹೊಸ ಯೋಜನೆ ರೂಪಿಸಲಾಗುವುದೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ಪಾವಗಡ ಪಟ್ಟಣಕ್ಕೆ ಉತ್ತರ ಪೆನ್ನಾರ್ ನದಿಯ ಮೂಲದಿಂದ ನೀರು ಸರಬರಾಜು ಯೋಜನೆಯನ್ನು ದಿನಾಂಕ: 23.2.2005ರಂದು ಅನುಷ್ಠಾನಗೊಳಿಸಲಾಗಿದೆ. ಈವರೆವಿಗೆ ಮಂಜೂರಾದ ಈ ಯೋಜನೆಗಾಗಿ ರೂ. 1108.55 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಜೂನ್ 2005ರಿಂದ ಫೆಬ್ರವರಿ 2006ರವರೆಗೆ ಸದರಿ ಯೋಜನೆಯಿಂದ ಕುಡಿಯುವ ನೀರಿಗೋಸ್ಕರ ಸುಮಾರು ದಿನಂಪ್ರತಿ 1.0 ದಶಲಕ್ಷ ಲೀಟರ್ ಪ್ರಮಾಣದಷ್ಟು ನೀರನ್ನು ಸರಬರಾಜು ಮಾಡಲಾಗಿದೆ. ಇದಲ್ಲದೆ, ಇತರೆ ಬಳಕೆಗಾಗಿ ಕೊಳವೆ ಬಾವಿಗಳಿಂದ ನೀರು ಪಡೆಯುತ್ತಿದ್ದು, ಒಟ್ಟಿನಲ್ಲಿ ತಲಾ ದಿನಂಪ್ರತಿ 45 ಲೀಟರ್ ಸರಬರಾಜು ಆಗಿರುತ್ತದೆ. ಕಳೆದ ಮೂರು ವರ್ಷಗಳಿಂದ ಈ ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆ ಇದ್ದುದರಿಂದ ನದಿಯಲ್ಲಿ ನೀರು ಹರಿದಿಲ್ಲದಿರುವುದರಿಂದ ನೀರಿನ ಒರತೆ ಕಡಿಮೆಯಾಗಿದ್ದು, 0.15 ದಶಲಕ್ಷ ಲೀಟರ್ ನೀರನ್ನು ಮಾತ್ರ ಮಾರ್ಚ್ 2006ರಿಂದ ಕುಡಿಯುವ ನೀರಿಗೋಸ್ಕರ ಪ್ರತಿದಿನ ತಂದು ಮಾಡಲು ಸಾಧ್ಯವಾಗುತ್ತಿದೆ. ಈಭಾರಿ ಮಳೆಯಾದ ಕೂಡಲೇ ಪೂರ್ಣ ಪ್ರಮಾಣದ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆ ಎಂದು ನಂಬಲಾಗಿದೆ.

ಇ) 1) 1978ರಲ್ಲಿ 4 ಕೊಳವೆ ಬಾವಿ, 1.35 ಲಕ್ಷ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ಮತ್ತು 50,000 ಲೀಟರ್ ಸಾಮರ್ಥ್ಯದ ನೆಲಮಟ್ಟದ ಸಂಗ್ರಹಾಗಾರಗಳು ಮತ್ತು ಕೊಳವೆ ಮಾರ್ಗಗಳನ್ನು ನಿರ್ಮಿಸಲಾಗಿತ್ತು. ಇವುಗಳ ವೆಚ್ಚ ರೂ. 6.60 ಲಕ್ಷಗಳಾಗಿರುತ್ತದೆ.

2) ಇದಲ್ಲದೆ 89 ಉತ್ತರ ಪೆನ್ನಾರ್ ನದಿಯ ಮೂಲದಿಂದ 2005ರಲ್ಲಿ ಹಾಲಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. ಈ ಯೋಜನೆಯ ವೆಚ್ಚ ರೂ. 1108.55 ಲಕ್ಷಗಳಾಗಿರುತ್ತದೆ.

ಈ) ಈ ಯೋಜನೆಗಳಿಂದ ಸಾರ್ವಜನಿಕರಿಗೆ ಪ್ರಯೋಜನವಾಗಿದೆ. ಆದ್ದರಿಂದ ಹೊಸ ಯೋಜನೆ ರೂಪಿಸುವುದು ಉದ್ಭವಿಸುವುದಿಲ್ಲ.

ಚೆನ್ನಮ್ಮನ ಕಿತ್ತೂರನ್ನು ಪ್ರವಾಸೋದ್ಯಮ ಸ್ಥಳವನ್ನಾಗಿಸುವ ಕುರಿತು

299 (587) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು): ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐತಿಹಾಸಿಕ ಸ್ಥಳವಾದ ಚೆನ್ನಮ್ಮನ ಕಿತ್ತೂರಿನಲ್ಲಿರುವ ಕೋಟೆಯನ್ನು ಅಭಿವೃದ್ಧಿಪಡಿಸಿ ಕಿತ್ತೂರನ್ನು ಪ್ರವಾಸೋದ್ಯಮ ಸ್ಥಳವನ್ನಾಗಿಸುವ ವಿಚಾರ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು?